**ಪತ್ರಿಕಾ ಪ್ರಕಟಣೆ**

**ವಿಜಯಪುರ**
**ದಿನಾಂಕ: 06.08.2021.**

**1] ವಿಜಯಪುರ ಗ್ರಾಮೀಣ ಪೊಲೀಸ ಠಾಣೆ ಗುನ್ನೆ ನಂ: 240/2021 ಕಲಂ: 279, 304(ಎ) ಐಪಿಸಿ**

ದಿನಾಂಕ: 04.08.2021 ರಂದು 12.30 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಮೃತ ಮಧು ರುದ್ರಪ್ಪ ವಯಾ: 38 ವರ್ಷ ಸಾ॥ ವಡ್ನಾಳ ತಾ॥ ಚನ್ನಗಿರಿ ಜಿ॥ ದಾವಣಗೆರೆ ಈತನು ಮುಗಳಖೋಡದಿಂದ ವಿಜಯಪುರಕ್ಕೆ ತನ್ನ ಹೋಂಡಾ ಆ್ಯಕ್ಟಿವ್ ಮೋಟಾರ್ ಸೈಕಲ್ ನಂ: ಕೆಎ:25 ಎಚ್‌ಎ:7480 ನೇದ್ದನ್ನು ಅತೀ ಜೋರಿನಿಂದ ವ ನಿರ್ಲಕ್ಷತನದಿಂದ ನಡೆಯಿಸಿಕೊಂಡು ಬರುವಾಗ ಖತಿಜಾಪೂರ ಬಸ್ ನಿಲ್ದಾಣದ ಹತ್ತಿರ ಇರುವ ರೋಡ್ ಬ್ರೇಕ್ ಜಿಗಿಸಿ ತನ್ನ ನಿಯಂತ್ರಣ ತಪ್ಪಿ ತನ್ನಿಂದ ತಾನೆ ರಸ್ತೆ ಮೇಲೆ ಬಿದ್ದು ತಲೆಗೆ ಹಾಗೂ ಮುಖಕ್ಕೆ ಭಾರಿಗಾಯ ಪೆಟ್ಟು ಹೊಂದಿದ್ದು ಅದರ ಉಪಚಾರ ಕುರಿತು ವಿಜಯಪುರ ಸರ್ಕಾರಿ ಆಸ್ಪತ್ರೆಗೆ ತಂದಾಗ ಆಸ್ಪತ್ರೆಯಲ್ಲಿ ಮೃತಾಗಿದ್ದು ಇರುತ್ತದೆ. ಈ ಬಗ್ಗೆ ರವಿಚಂದ್ರ ರುದ್ರಪ್ಪ ಸಾ॥ ವಡ್ನಾಳ ತಾ॥ ಚನ್ನಗಿರಿ ಜಿ॥ ದಾವಣಗೆರೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 05.08.2021 ರಂದು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಹೊರ್ತಿ ಪೊಲೀಸ ಠಾಣೆ ಗುನ್ನಾ. ನಂ: 99/2021 ಕಲಂ: 279, 337, 304(ಎ) ಐಪಿಸಿ**

ದಿನಾಂಕ 05.08.2021 ರಂದು ಮುಂಜನೆ 10:00 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಮೃತ ಅಶೋಕ ಲಕ್ಷ್ಮಣ ರಾಠೋಡ ವಯಾ 29 ವರ್ಷ ಸಾ॥ ಇಂಚಗೇರಿ ಮಹಾವೀರ ನಗರ ತಾಂಡಾ ತಾ॥ ಚಡಚಣ ಪಲ್ಸರ ಮೋಟಾರ ಸೈಕಲ ನಂ: ಕೆಎ:28 ಇವ್ಹಿ:3268 ನೇದ್ದರ ಸವಾರ ಇವನು ಕನ್ನೂರ ಗ್ರಾಮಕ್ಕೆ ಬ್ಯಾಂಕಿನ ಕೆಲಸ ನಿಮಿತ್ಯ ತನ್ನ ಪಲ್ಸರ ಮೋಟಾರ ಸೈಕಲ ನೇದ್ದರ ಮೇಲೆ ತಮ್ಮ ತಾಂಡಾದ ಮಾರುತಿ ತಂ ಶೇವು ಪವಾರ ವಯಾ 45 ವರ್ಷ ಈತನಿಗೆ ಹಿಂದೆ ಕೂಡಿಸಿಕೊಂಡು ತಾಂಡಾದಿಂದ ಕನ್ನೂರ ಕಡೆಗೆ ಹೋಗುವಾಗ ಮೋಟಾರ ಸೈಕಲನ್ನು ಅತೀವೇಗದಿಂದ ಮತ್ತು ನಿರ್ಲಕ್ಷತನದಿಂದ ನಡೆಯಿಸಿಕೊಂಡು ಹೊರಟು ಮುಂದೆ ಹೊರಟ ವಾಹನಕ್ಕೆ ಓವರ್ ಟೇಕ್ ಮಾಡುತ್ತಾ ಹೊರಟಾಗ ವಾಹನವನ್ನು ಡಾಂಬರ ರಸ್ತೆಯಿಂದ ಕೆಳಗಡೆ ಇಳಿಸಿ ಮೇಲೆ ತೆಗೆದುಕೊಳ್ಳುವಾಗ ನಿಯಂತ್ರಣ ತಪ್ಪಿ ಅಪಘಾತ ಪಡಿಸಿ ಬಲಗಡೆ ಮೆಲಕಿಗೆ ಹಾಗೂ ತಲೆಗೆ ಬಾರೀ ಗಾಯ ಪೆಟ್ಟುಗಳಾಗಿ ಸ್ಥಳದಲ್ಲಿಯೇ ಮರಣ ಹೊಂದಿದ್ದು ಹಿಂಬದಿ ಸವಾರ ಮಾರುತಿ ಪವಾರ ಇವನಿಗೆ ಕೈ ಕಾಲಿಗೆ ಸಣ್ಣ ಪುಟ್ಟ ಗಾಯ ಪೆಟ್ಟುಗಳು ಆಗಿರುತ್ತದೆ. ಈ ಬಗ್ಗೆ ರವಿ ಲಕ್ಷ್ಮಣ ರಾಠೋಡ ಸಾ॥ ಇಂಚಗೇರಿ ಮಹಾವೀರ ನಗರ ತಾಂಡಾ ತಾ॥ ಚಡಚಣ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 05.08,2021 ರಂದು ಹೊರ್ತಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಗೋಲಗುಮ್ಮಜ ಪೊಲೀಸ ಠಾಣೆ ಗುನ್ನಾ ನಂ: 97/2021 ಕಲಂ: 87 ಕೆಪಿ ಆ್ಯಕ್ಟ್**

ದಿನಾಂಕ 04.08.2021 ರಂದು 16.45 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತರಾದ 1) ಅನೀಲ ಕಾಮಣ್ಣ ಕಾಳೆ, ಸಾ: ಎಚ್.ಎಸ್ ಕಾಲನಿ ವಿಜಯಪುರ. 2) ರಾಜು ಚಂದ್ರಶೇಖರ ವಠಾರ, ಸಾ॥ ಶಿಕಾರಖಾನೆ, ವಿಜಯಪುರ. 3) ಬಸವರಾಜ ನರಸಪ್ಪ ಆಸಂಗಿ, ಸಾ॥ ತಾಜಪೂರ 4) ಹಣಮಂತ ಪಾಂಡುರಂಗ ಪೋಳ. ಸಾ॥ ಅಲಿಯಾಬಾದ, 5) ಸದಾಶಿವ ಶಾಮರಾವ್ ಕದಂ, ಸಾ॥ ರಾಮಪ್ರಸಾದ ಗಲ್ಲಿ, ದತ್ತ ಮಂಧಿರ ಹತ್ತಿರ, ವಿಜಯಪುರ. 6) ಅಶೋಕ ಪ್ರಭಾಕರ ಪಾಟ್ನೆ, ಸಾ॥ ಕುಂಬಾರ ಓಣಿ, ಸೋಲಾಪೂರ ರಸ್ತೆ ವಿಜಯಪುರ. 7) ಶಿವಾನಂದ ಭೀಮಪ್ಪ ದೊಡಮನಿ, ಸಾ॥ ಅಲಿಯಾಬಾದ 8)ಮಹಾದೇವ ಬಸವರಾಜ ಮ್ಯಾಗೇರಿ, ಸಾ॥ ಸುಭಾಷ ಕಾಲನಿ ವಿಜಯಪುರ. 9) ಮಕ್ತೂಮಸಾಬ ಅಬ್ದುಲಸಾಬ ಗೊರಮಗೋಳ, ಸಾ॥ ಗಾಂಧಿನಗರ, ಮುನವಳ್ಳಿ ತಾ: ಸವದತ್ತಿ, ಜಿ: ಬೆಳಗಾವಿ, ಹಾಲಿ: ಬಾರಾಕಮಾನ ಹತ್ತಿರ ವಿಜಯಪುರ. 10) ರವಿ ನಾಗಯ್ಯ ಯಾದವಮಠ, ಸಾ॥ ಬೆಂಡಿಗೇರಿ ಓಣಿ ವಿಜಯಪುರ. 11) ಶಿವಾಜಿ ಲಕ್ಷ್ಮಣ ರಾಠೋಡ, ಸಾ॥ ಎಚ್.ಎಸ್. ಕಾಲನಿ ವಿಜಯಪುರ. 12) ವೆಂಕಟೇಶ ಅರುಣ ಕಾಳೆ, ಸಾ॥ ಎಚ್.ಎಸ್ ಕಾಲನಿ ವಿಜಯಪುರ. 13) ಭರತ ಸಂತರಾಮ ರಾಠೋಡ, ಸಾ॥ ವಿಜಯಪುರ. 14) ಪರಶುರಾಮ ಶೇಟ್ಟೆಪ್ಪ ಜೋರಾಪೂರ,ಸಾ॥ ಅಲ್ಲಾಪೂರ ಓಣಿ ವಿಜಯಪುರ, 15) ರವಿ ಅರ್ಜುನ ಚವ್ಹಾಣ, ಸಾ॥ ಎಚ್.ಎಸ್, ಕಾಲನಿ ವಿಜಯಪುರ ಇವರು ಜಯಪುರ ಶಹರದ ಹರಣಶಿಕಾರಿ ಕಾಲನಿಯ ಸುಂದರೇಶ್ವರ ದೇವಸ್ಥಾನದ ಹತ್ತಿರ ಬಯಲು ಜಾಗೆಯ ಸಾರ್ವಜನಿಕ ಸ್ಥಳದಲ್ಲಿ ಯಾರೋ ಕೆಲವು ಜನರು ಇಸ್ಪೇಟು ಎಲೆಗಳ ಆಧಾರದ ಮೇಲೆ ಹಣ ಪಣಕ್ಕೆ ಹಾಕಿ ಅಂದರ್ ಬಾಹರ್ ಅಂಬುವ ಮನ್ನಾ ಜೂಜಾಟದಲ್ಲಿ ತೊಡಗಿದಾಗ ಸಿಕ್ಕ ಅಪರಾಧ. ಈ ಬಗ್ಗೆ ಸ:ತ: ರಾಜೇಶ ಎಸ್ ಲಮಾಣಿ ಪಿಎಸ್ಐ (ಕಾ&ಸು) ಗೋಲಗುಮ್ಮಜ್ ಪೊಲೀಸ ಠಾಣೆ ವಿಜಯಪುರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 05.08,2021 ರಂದು ಗೋಲಗುಮ್ಮಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**4] ಗೋಲಗುಮ್ಮಜ ಪೊಲೀಸ ಠಾಣೆ ಗುನ್ನಾ. ನಂ: 98/2021 ಕಲಂ: 87 ಕೆ ಪಿ ಆ್ಯಕ್ಟ್.**

ದಿನಾಂಕ 04.08.2021 ರಂದು 18.45 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತರಾದ 1) ಗುರುದೇವ ನಾಮದೇವ ಕಾಳೆ, ಸಾ: ಎಚ್.ಎಸ್ ಕಾಲನಿ ವಿಜಯಪುರ 2) ಇಸ್ಮಾಯಿಲ ಆಲಂಸಾಬ ಬೇಪಾರಿ, ಸಾ॥ ಗಾಂಧಿನಗರ ಮುನವಳ್ಳಿ ತಾ: ಸವದತ್ತಿ, ಜಿ: ಬೆಳಗಾವಿ ಹಾಲಿವಾಸ: ಎಚ್.ಎಸ್ ಕಾಲನಿ ವಿಜಯಪುರ. 3) ರವಿಕುಮಾರ ರಮೇಶ ಚವ್ಹಾಣ, ಸಾ: ಎಚ್.ಎಸ್ ಕಾಲನಿ ವಿಜಯಪುರ. 4) ಕಿರಣ ದೇವದಾಸ ಕಾಳೆ, ಸಾ॥ ಎಚ್.ಎಸ್.ಕಾಲನಿ ವಿಜಯಪುರ. 5) ಶಶಿಕಾಂತ ಲಕ್ಷ್ಮಣ ಸಿಂಧೆ, ಸಾ॥ ವಿಜಯಪುರ. 6) ಗೋಪಾಲ ಸುಭಾಷ ಶಹಾಪೂರ, ಸಾ॥ ಅಲ್ಲಾಪುರ ಓಣಿ ವಿಜಯಪುರ 7) ಗಿರಿಮಲ್ಲ ತಿಪ್ಪಣ್ಣ ಅಲಿಬಾದಿ, ಸಾ॥ ಅಲ್ಲಾಪೂರ ಓಣಿ ವಿಜಯಪುರ 8) ಹಣಮಂತ ಭೀಮಪ್ಪ ಹೆಂಡೆಗಾರ, ಸಾ: ಅಲ್ಲಾಪೂರ ಓಣಿ ವಿಜಯಪುರ 9) ಚನ್ನಪ್ಪ ಭೀಮಪ್ಪ ಮ್ಯಾಕೇರಿ, ಸಾ॥ ಅಲ್ಲಾಪೂರ ಓಣಿ ವಿಜಯಪುರ ಇವರು ವಿಜಯಪುರ ಶಹರದ ಹರಣಶಿಕಾರಿ ಕಾಲನಿಯ ಮರಗಮ್ಮ ದೇವಸ್ಥಾನದ ಹತ್ತಿರ ಬಯಲು ಜಾಗೆಯ ಸಾರ್ವಜನಿಕ ಸ್ಥಳದಲ್ಲಿ ಇಸ್ಪೇಟು ಎಲೆಗಳ ಆಧಾರದ ಮೇಲೆ ಹಣ ಪಣಕ್ಕೆ ಹಾಕಿ ಅಂದರ್ ಬಾಹರ್ ಅಂಬುವ ಮನ್ನಾ ಜೂಜಾಟದಲ್ಲಿ ತೊಡಗಿದಾಗ ಸಿಕ್ಕ ಅಪರಾಧ. ಈ ಬಗ್ಗೆ ಸ:ತ: ರಾಜೇಶ ಎಸ್ ಲಮಾಣಿ ಪಿಎಸ್ಐ (ಕಾ&ಸು) ಗೋಲಗುಮ್ಮಜ್ ಪೊಲೀಸ ಠಾಣೆ ವಿಜಯಪುರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 05.08,2021 ರಂದು ಗೋಲಗುಮ್ಮಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**5] ಇಂಡಿ ಗ್ರಾಮೀಣ ಪೊಲೀಸ ಠಾಣೆ ಗುನ್ನಾ. ನಂ: 138/2021 ಕಲಂ: 78(3) ಕೆ ಪಿ ಆ್ಯಕ್ಟ್**

ದಿನಾಂಕ 05.08.2021 ರಂದು 14.00 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತರಾದ 1] ಹುಸೇನಸಾಬ ಸೈಫನಸಾಬ ನಾಟೀಕಾರ ಸಾ: ಹಿರೇಮಸಳಿ 2] ಶಶಿಕಾಂತ ಪಾಟೀಲ್ ಸಾ: ದುದನಿ ಇವರು ತಮ್ಮ ತಮ್ಮ ಫಾಯ್ದೆಗೋಸ್ಕರ ಸಾರ್ವನಿಕರ ಕಡೆಯಿಂದ 1 ರೂಪಾಯಿಗೆ 80 ರೂ ಕೊಡುವ ಕರಾರಿನ ಮೇಲೆ ಕಲ್ಯಾಣಿ ಓಸಿ ಮಟಕಾ ಜೂಜಾಟ ಬರೆದುಕೊಳ್ಳುತ್ತಿದ್ದಾಗ ಸಿಕ್ಕ ಅಪರಾಧ. ಜಪ್ತಾದ ಮಾಲು: 12,340/- ರೂಗಳು, ಓಸಿ ಅಂಕಿ ಸಂಖ್ಯೆ ಬರೆದ ಚೀಟಿ ಒಂದು, ಪೆನ್ನು ಒಂದು ಈ ಬಗ್ಗೆ ಸ:ತ: ಐ. ಎಂ. ದುಂಡಸಿ ಪಿಎಸ್ಐ ಇಂಡಿ ಗ್ರಾಮೀಣ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 05.08,2021 ರಂದು ಇಂಡಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**6] ಬ ಬಾಗೇವಾಡಿ ಪೊಲೀಸ ಠಾಣೆ ಗುನ್ನಾ. ನಂ: 137/2021 ಕಲಂ: 78(3) ಕೆ.ಪಿ ಆ್ಯಕ್ಟ.**

ದಿನಾಂಕ 05.08.2021 ರಂದು 19:35 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತರಾದ 1] ರಾಕೇಶ ಮಲಕಣ್ಣ ತಳವಾರ ಸಾ: ಯಾಳವಾರ 2] ಪರಶುರಾಮ ಸೋಮಪ್ಪ ತವರಮನೆ ಸಾ: ಯಾಳವಾರ ಇವರು ಯಾಳವಾರ ಗ್ರಾಮದ ಸಾತಿಹಾಳ ರೋಡಿನಲ್ಲಿ ಅಂಬೇಡ್ಕರ್ ವನದ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ತಮ್ಮ ಪಾಯಿದೆಗೊಸ್ಕರ ಅಂಕಿಸಂಖ್ಯೆಗಳ ಆಧಾರದ ಮೇಲೆ ಒಂದು 1 ರೂಪಾಯಿಗೆ 80 ರೂಪಾಯಿ ಕೊಡುವುದಾಗಿ ಹೇಳಿ, ಕೆಲವು ಸಾರ್ವಜನಿಕರಿಗೆ ಸೇರಿಸಿ ಸಾರ್ವಜನಿಕರಿಂದ ಹಣವನ್ನು ಪಡೆದುಕೊಂಡು ಬಾಂಬೆ ಮಟಕಾ ಜೂಜಾಟದ ನಡೆಸಿದ ಕಾಲಕ್ಕೆ ಸಿಕ್ಕಿದ್ದು ಇರುತ್ತದೆ. ಜಪ್ತಾದ ಮಾಲು: 1] ರೋಖ ಹಣ 550/-ರೂ. 2] ಓಸಿ ನಂಬರ ಬರೆದ ಚೀಟಿ ಎರಡು ಕಿ:00-00. 3] ಬಾಲಪೆನ್ ಎರಡು. ಕಿ:00-00 ಈ ಬಗ್ಗೆ ಸ:ತ: ಬಸವರಾಜ ಎಮ್. ಪಾಟೀಲ ಪಿಐ, ಬಸವನ ಬಾಗೇವಾಡಿ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 05.08,2021 ರಂದು ಬ ಬಾಗೇವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.